ಆ ಹುಡುಗಿ ಹೀಗೆ ಅಸಹಾಯಕಳ ಹಾಗೆ ಅಪರಿಚಿತರ ಮುಂದೆ ಗೋಗರೆಯುವುದ ಕಂಡು ಆಕೆಗೆ ಅಯ್ಯೋ ಎನ್ನಿಸಿತು. "ಸರಿ ಈಗ ಮನೆಗೆ ಹೋಗು, ನಾಳೆ ಏನಾದ್ರೂ ಮಾಡೋಣ..." ಮಣಿವೇಲು ಏಳಲು ಅಣಿಯಾದ. ಆಕೆ ಇದ್ದಕ್ಕಿದ್ದ ಹಾಗೆ ಮಣಿವೇಲುವಿನ ಕಾಲು ಹಿಡಿದುಕೊಂಡಳು. "ಅಣ್ಣಾ, ಅಮ್ಮ ಮನೆ ಸೇರಿಸ್ತಾ ಇಲ್ಲ; ಮರ್ಯಾದೆ ತೆಗೆದೆ ಅಂತ ಹೊಡೆದು ಆಚೆ ದಬ್ಬಿದ್ಲು" ಗಂಟಲು ಉಬ್ಬಿ ಬಿಕ್ಕಳಿಸಿದಳು. ಅರುಂಧತಿ ವಿಚಿತ್ರವೆನ್ನಿಸಿತು. 'ಕಳ್ಳಿಯೊಬ್ಬಳು ಹೀಗೆ ಮಗಳನ್ನು ಹೊರದಬ್ಬುವುದೆಂದರೆ... ಅದು ಮಾನ ಮರ್ಯಾದೆ ಎಂದುಕೊಳ್ಳುವುದು...' ಆಕೆಗೆ ನಂಬಲಾಗಲಿಲ್ಲ. ಮಣಿವೇಲುವೂ ಅದೇ ಆಶ್ಚರ್ಯದಲ್ಲಿ "ಹೌದಾ" ಎಂದ. "ಅಣ್ಣಾ, ನೀವೊಂದು ಮಾತು ಹೇಳಿದ್ರೆ..."

"ಸರಿ, ಹೇಳ್ತೀನಿ ಈಗ ನೀನು ಮೊದಲು ಗೌರ್ಮೆಂಟ್ ಆಸ್ಪತ್ರೆಗೆ ಹೋಗಿ ಅಡ್ಮಿಟ್ ಆಗಿ ಕೇಸ್ ಫೈಲ್ ಮಾಡು" ಎನ್ನುತ್ತ ಐದು ನೂರರ ಎರಡು ನೋಟುಗಳನ್ನು ಆಕೆಯ ಕೈಗಿತ್ತ. ಆಕೆ, "ಬೇಡ ಅಣ್ಣ, ಅಮ್ಮನಿಗೆ ಫೋನ್ ಮಾಡಿ" ದುಂಬಾಲು ಬಿದ್ದಳು. ಕೊನೆಗೂ ಮೀನಾ ಮೇಷ ಎಣಿಸಿ ಸಿಡಿಮಿಡಿಗುಟ್ಟುತ್ತಲೇ ಮಣಿವೇಲು ನಂಬರ್ ಒತ್ತಿದ. ಆಕೆ ಸಮಾಧಾನಗೊಂಡವಳಂತೆ ಹೊರಟಳು. ಅರುಂಧತಿಗೆ ವಿಪರೀತ ಭಯವೆನ್ನಿಸಿತು. "ಮಧ್ಯರಾತ್ರಿ ಮನೆಗೆ ಬಂದ ಹೆಣ್ಣು ಮಗಳೊಬ್ಬಳನ್ನು ಹೀಗೆ ಒಂಟಿ ಕಳಿಸುವುದಾ? ನೀವು ಹೋಗಿ ಬರಬಾರದಾ?" ಹೇಳಲೋ ಬೇಡವೋ ಎಂಬಂತೆ ಹೇಳಿದಳು.

"ಅಯ್ಯೋ ಅವರೇನು ನಿನ್ನ ತರಾನಾ? ಅವರ ಕೆಲಸ ಶುರುವಾಗೋದೇ ಮಧ್ಯರಾತ್ರಿಯಿಂದ ಅಲ್ಲವೇನಮ್ಮಾ..." ಆಕೆಯನ್ನು ಉದ್ದೇಶಿಸಿ ನುಡಿದ. ಆಕೆ ಪೆಚ್ಚಾದಳು. ಅರುಂಧತಿಯ ಮುಖ ನೋಡುತ್ತ "ಹೌದು" ಎನ್ನುವಂತೆ ತಲೆಯಾಡಿಸಿದಳು. ಆಗವಳು "ಹೂಂ" ಎನ್ನುವಾಗ ಕಣ್ಣ ಹನಿಯೊಂದು ಪಟ್ ಎಂದು ಸೋಫಾ ಮೇಲೆ ಬಿದ್ದಿದ್ದನ್ನು ಅರುಂಧತಿ ತಕ್ಷಣಕ್ಕೆ ಗುರುತಿಸಿದಳಾದರೂ ಮಣಿವೇಲುವಿನ ಗಮನಕ್ಕೆ ಬರಲಿಲ್ಲ.

ವಾರ ಕಳೆಯಿತು. ಮಣಿವೇಲುವನ್ನು ಅರುಂಧತಿ ಒಂದೆರಡು ಬಾರಿ ಕೇಳಿದಳಾದರೂ ಅವ ಏನೊಂದು ನುಡಿದಿರಲಿಲ್ಲ. ಬದಲಾಗಿ "ಏನು ರೇಪ್ ಕೇಸಲ್ಲಿ ಬಾರಿ ಇಂಟ್ರಸ್ಟು" ಎಂದಿದ್ದ. ಹೇಸಿಗೆ ಎನ್ನಿಸಿತ್ತು. ಅವ ಯಾವಾಗಲೂ ಹಾಗೆ; ನಡುವೆ ಅಂತರವೊಂದನ್ನು ಇಟ್ಟುಕೊಂಡು ಅನುಮಾನಿಸುತ್ತಲೇ ಬದುಕುತ್ತಾನೆ. ಪ್ರತಿ ಸಂಬಂಧಗಳನ್ನು ದೇಹದ ಮಟ್ಟದಲ್ಲಷ್ಟೇ ಊಹಿಸುತ್ತಾನೆ. ಮೊದಲಿಗೆ ಅದು ರೇಜಿಗೆ, ಅವನ ಪ್ರೀತಿಯ ಪೊಸೆಸ್ಸಿವ್‌ನೆಸ್ ಅನ್ನಿಸಿದರೂ ಆ ನಂತರ ಅದು ತನ್ನನ್ನು ಹಿಡಿದಿಟ್ಟುಕೊಳ್ಳುವ ಉಪಾಯ ಎಂದು ಅರುಂಧತಿಗೆ ಅನ್ನಿಸಿತ್ತು. ಅವನ ಅಸಡ್ಡೆ, ಅನಾದರಗಳು ಕೆಲವೊಮ್ಮೆ ತನ್ನದೇ ಆದಂತಹ ಕಂಫರ್ಟ್ ಜೋನ್ ಕೊಡುತ್ತದೆಯಾದರೂ ಕೆಲವೊಮ್ಮೆ ತೀರಾ ಒಬ್ಬಂಟಿ ಎನ್ನಿಸುವಷ್ಟರ ಮಟ್ಟಿಗೆ ಹತಾಶೆ ಹುಟ್ಟಿಸುತ್ತದೆ.

ಇಬ್ಬರ ನಡುವೆ ಎಷ್ಟೊಂದು ಗೋಡೆಗಳು ಎನ್ನಿಸಿ ಮನಸ್ಸು ಮುದುಡುತ್ತದೆ. ಬಹುಶಃ ಎಲ್ಲ ದಾಂಪತ್ಯಗಳು ಹೀಗೆ ಇರುತ್ತವೆಯೇನೋ ಎನ್ನಿಸಿ ನಿರಾಳವೂ ಆಗುತ್ತದೆ. ಬೆನ್ನುಗಳಷ್ಟೇ ಮಾತಾಡುವ ಇಂತಹ ಸಂಬಂಧಗಳನ್ನು ಮನುಷ್ಯರು ಏಕೆ ಇಟ್ಟುಕೊಂಡೇ ಸಾಯುತ್ತಾರೆ ಎಂದು ಆಕೆ ಅದೆಷ್ಟೋ ಬಾರಿ ಯೋಚಿಸಿ ಸುಸ್ತಾಗಿದ್ದಾಳೆ. ಹೊರಟುಬಿಡಬೇಕು ಈ ನೀರವ ಮೌನದಿಂದ ಎಂದು ನೂರಾರು ಬಾರಿ ನಿರ್ಧರಿಸಿದ್ದಾಳೆ. ಆದರೆ ಹೋಗುವುದಾದರೂ ಎಲ್ಲಿಗೆ? ಮತ್ತೆ ಅದೊಂದು ದಿನ ಮಧ್ಯಾಹ್ನ ಮತ್ತದೇ ಬಾಗಿಲು ಬಡಿಯುವ ಸದ್ದು. ಹೋಗಿ ನೋಡಿದರೆ ಮಧುವಂತಿ ಜೊತೆಗೆ ಅವಳಮ್ಮ ಹನುಮಕ್ಕ. ಇಬ್ಬರೂ ಕಾತರದ ಕಣ್ಣುಗಳ ಬಾಗಿಲಿಗೆ ನೆಟ್ಟು ಕೂತಿದ್ದರು. ಅರುಂಧತಿಗೆ ಗಾಬರಿಯಾಯಿತು. ಪದೇ ಪದೇ ಇವರು ಇಲ್ಲಿ ಬರುವುದು, ಅದೂ ಮಣಿವೇಲು ಇಲ್ಲದ ವೇಳೆಯಲ್ಲಿ ಎಂದು ಯೋಚಿಸುವಾಗಲೇ "ನಾನು ಹನುಮಕ್ಕ ಕಣವ್ವಾ" ಎಂದಳು. ನಿಂತಿದ್ದವಳು ಕೈ